ಕರ್ನಾಟಕ ಸರ್ಕಾರ

**ಜಿಲ್ಲಾ ಪಂಚಾಯತ (ಜಿಲ್ಲಾ ಆಡಳಿತ ಭವನ) ಬಾಗಲಕೋಟೆ 587 103**

**ದೂರವಾಣಿ ಸಂಖ್ಯೆ : 08354-235576, 235591** mail ID: ceo.zp.karbgk@nic.in **ಫ್ಯಾಕ್ಸ್ : 08354-235562**

ನಂ:ಜಿಪಂಅ/ಉಖಾಯೋ/ಎಡಿ-13/ವಿನಿದಿ- /2023-24 ದಿನಾಂಕ:21.09.2023

**ನೇಮಕಾತಿ ಅಧಿಸೂಚನೆ.**

ವಿಷಯ:- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಖಾಲಿಯಿರುವ ಹಾಗೂ ಹೊಸದಾಗಿ ಅನುಮತಿಸಿದ ತಾಂತ್ರಿಕ ಸಹಾಯಕರು **(ತೋಟಗಾರಿಕೆ, ಅರಣ್ಯ ರೇಷ್ಮೆ, ತಾಂತ್ರಿಕ ಸಹಾಯಕ ಸಿವಿಲ್, ಮತ್ತು ತಾಲೂಕಾ ಎಮ್,ಆಯ್,ಎಸ್)** ಹುದ್ದೆಗಳಿಗೆ ಹೊರಗುತ್ತಿಗೆ ಮೂಲಕ ಸಿಬ್ಬಂದಿ ನೇಮಕ ಕುರಿತು.

ಉಲ್ಲೇಖ: ಮಾನ್ಯ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು ರವರ ಜ್ಞಾಪನಾ ಪತ್ರ ಸಂಖ್ಯೆ:ಆರ್‌ಡಿಸಿ-ಇಜಿಎಸ್/874/2022(ಇ-931951) ದಿನಾಂಕ:01.12.2022

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೊಸದಾಗಿ ಮಂಜೂರಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಸೇವೆಯನ್ನು ಪಡೆಯಲು ಉಲ್ಲೇಖದನ್ವಯ ಸೂಚಿಸಿರುತ್ತಾರೆ.

ಪ್ರಯುಕ್ತ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಅಗತ್ಯವಿರುವ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು, ಖಾಲಿ ಇರುವ ತಾಂತ್ರಿಕ ಸಹಾಯಕರು **(ತೋಟಗಾರಿಕೆ, ಅರಣ್ಯ, ರೇಷ್ಮೆ, ತಾಂತ್ರಿಕ ಸಹಾಯಕ ಸಿವಿಲ್, ಮತ್ತು ತಾಲೂಕಾ ಎಮ್,ಆಯ್,ಎಸ್ ಸಂಯೋಜಕರು)** ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ಖಾಲಿ ಇರುವ ಹುದ್ದೆಗಳ ವಿವರಗಳು ಹಾಗೂ ನಿಗಧಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ ಮತ್ತು ಮಾಸಿಕ ಸಂಭಾವಣೆ ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ. | ಹುದ್ದೆಯ ವಿವರ | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 01. | ರೇಷ್ಮೆ ತಾಂತ್ರಿಕ ಸಹಾಯಕರು | 01 | Bsc /Msc(Sericulture). ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಕನಿಷ್ಠ 03 ವರ್ಷಗಳ ಅನುಭವ. |
| 02. | ತೋಟಗಾರಿಕೆ ತಾಂತ್ರಿಕ ಸಹಾಯಕರು | 07 | Bsc/Msc (Horticulture).ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಕನಿಷ್ಠ 03 ವರ್ಷಗಳ ಅನುಭವ. |
| 03. | ಅರಣ್ಯ ತಾಂತ್ರಿಕ ಸಹಾಯಕರು | 04 | Bsc/Msc (Forestry). ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಕನಿಷ್ಠ 03 ವರ್ಷಗಳ ಅನುಭವ. |
| 04 | ತಾಂತ್ರಿಕ ಸಹಾಯಕ (ಸಿವಿಲ್) | 01 | B.E/Mtech (Civil) ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಕನಿಷ್ಠ 03 ವರ್ಷಗಳ ಅನುಭವ. |
| 05 | ತಾಲೂಕಾ ಎಮ್.ಆಯ್.ಎಸ್. ಸಂಯೋಜಕರು. | 01 | Bca / Mca / BE Computer Science, Graduation in computer Science and any other equivalent qualification. ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಕನಿಷ್ಠ 03 ವರ್ಷಗಳ ಅನುಭವ. |

## ಷರತ್ತುಗಳು

- ಅಭ್ಯರ್ಥಿಯ ವಯೋಮಿತಿ ಕನಿಷ್ಠ 18 ವರ್ಷ ಹಾಗೂ ಅಧಿಸೂಚನೆಯ ಅಂತಿಮ ದಿನಾಂಕ:**19.10.2023** ಕ್ಕೆ ಅಭ್ಯರ್ಥಿಯ ವಯಸ್ಸು 40 ವರ್ಷದೊಳಗೆ ಇರತಕ್ಕದ್ದು.
- ಅಭ್ಯರ್ಥಿಯು ವಿದ್ಯಾರ್ಹತೆ ಸಂಬಂಧಿಸಿದ ವಿಷಯದಲ್ಲಿ ಪದವಿ ಹೊಂದಿರಬೇಕು. ಸ್ನಾತಕೊತ್ತರ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು.
- ಸಂಬಂಧಿಸಿದ ವಿಷಯದ ಕಾರ್ಯಕ್ಷೇತ್ರದಲ್ಲಿ ಕನಿಷ್ಠ 03 ವರ್ಷಗಳ ಸೇವಾನುಭವ ಹೊಂದಿರಬೇಕು.
- ಮಾಸಿಕ ಸಂಭಾವಣೆ ಹುದ್ದೆಗಣುಗುನವಾಗಿ ನಿಗದಿಪಡಿಸಿದೆ.
- ನೇಮಕಾತಿ ಅಧಿಸೂಚನೆಯನ್ನು ಬಾಗಲಕೋಟೆ ಜಿಲ್ಲೆಯ NIC ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಈ ವೆಬ್‌ಸೈಟ್ **https://bagalkot.nic.in** or **http://bagalkot.nic.in** ಲಿಂಕ್‌ನ್ನು ಬಳಸಿ ಅರ್ಜಿ ಸಲ್ಲಿಸಬಹುದಾಗಿದೆ.
- ಅರ್ಜಿಯನ್ನು ಸಲ್ಲಿಸಲು ದಿನಾಂಕ: **26.09.2023** ರಿಂದ **19.10.2023**. ರ ವರೆಗೆ ಕಲ್ಪಿಸಲಾಗಿದೆ.

## ಆಯ್ಕೆಯ ಪ್ರಕ್ರಿಯೆ

- ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಜಿಲ್ಲಾ ಪಂಚಾಯತ ಕಚೇರಿಯ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗುವುದು. ಆಕ್ಷೇಪಣೆ ಸಲ್ಲಿಸಲು ಒಂದು ವಾರದ ಕಾಲಾವಕಾಶ ನೀಡಲಾಗುವುದು.
- ಆಕ್ಷೇಪಣೆ ಪ್ರಕ್ರಿಯೆ ನಂತರ ಮೆರಿಟ್ ಪಟ್ಟಿಯನ್ನು ಅವಶ್ಯವಿರುವ ಹುದ್ದೆಗಣುಗುನವಾಗಿ ಅನುಪಾತ 1:3 ರಂತೆ Short list ನ್ನು ತಯಾರಿಸಲಾಗುವುದು.
- ಶಾರ್ಟ ಲಿಸ್ಟನಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲಾತಿ ಹಾಗೂ ಸ್ವಿಕೃತಿ ಪ್ರತಿಯನ್ನು ಪರಿಶೀಲನೆ ಮಾಡಲಾಗುವುದು.
- ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ದಿನಾಂಕವನ್ನು ಇ-ಮೇಲ್ / ದೂರವಾಣಿ ಮೂಲಕ ತಿಳಿಸಲಾಗುವುದು.
- ಒಂದು ವೇಳೆ ಮೆರಿಟ್ ಶಾರ್ಟ್ ಲಿಸ್ಟಿನಲ್ಲಿರುವ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಹಾಜರಾಗದೇ ಇದ್ದಲ್ಲಿ ಮೆರಿಟ್ ಪಟ್ಟಿಯಲ್ಲಿರುವ (Waiting list) ಮುಂದಿನ ಅಭ್ಯರ್ಥಿಗಳನ್ನು ಹುದ್ದೆಯ ನೇಮಕಾತಿಗೆ ಪರಿಗಣಿಸಲಾಗುವುದು.
- ಅಭ್ಯರ್ಥಿಗಳು ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ, ಹೊಂದಿರಬೇಕು ಈ ಬಗ್ಗೆ ಪ್ರಾಯೋಗಿಕ ಪರೀಕ್ಷೆ ಮೂಲಕ ಅಂತಿಮ ಆಯ್ಕೆ ಮಾಡಲಾಗುವುದು.
- ಆಯ್ಕೆಯಾದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಸಂಸ್ಥೆ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು. ಅಭ್ಯರ್ಥಿಗಳ ಕಾರ್ಯಕ್ಷಮತೆ ಬಗ್ಗೆ ಪ್ರತಿ ವರ್ಷ ಪರಿಶೀಲಿಸಿ ಮುಂದುವರೆಸುವ ಬಗ್ಗೆ ಕ್ರಮ ಕೈಕೊಳ್ಳಲಾಗುವುದು.
- ಅಂತಿಮ ಆಯ್ಕೆ ಪಟ್ಟಿ ಅನುಮೋದಿಸುವ ಅಥವಾ ರದ್ದುಪಡಿಸುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬಾಗಲಕೋಟೆ ಇವರ ತಿರ್ಮಾಣವಾಗಿರುತ್ತದೆ.
- ಹೆಚ್ಚಿನ ಮಾಹಿತಿಗಾಗಿ ಶ್ರೀಮತಿ ರಾಜೇಶ್ವರಿ ಗಡೇದ, ಎ.ಡಿ.ಪಿ.ಸಿ, ಮೋಬೈಲ್ ಸಂಖ್ಯೆ:6360514369 ಹಾಗೂ ಶ್ರೀ ಎಸ್, ಪಿ, ಕಬಾಡಗಿ. ದ್ವಿ, ದ, ಸಹಾಯಕ ಮೋಬೈಲ್ ಸಂಖ್ಯೆ:9110811094 ರೂಂ ನಂ:06 ಜಿಲ್ಲಾ ಪಂಚಾಯತ ಬಾಗಲಕೋಟೆ. ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬಾಗಲಕೋಟೆ.

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಗ್ರಾಮೀಅಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಪ್ಲಾಟ್ ನಂ:1234 ಕೆ.ಆಯ್.ಆಯ್.ಡಿ.ಸಿ ಕಟ್ಟಡ ಐಟಿ ಪಾರ್ಕ 5ನೇ ಮಹಡಿ ಸೌತ್ ಬ್ಲಾಕ್ ರಾಜಾಜಿನಗರ ಇಂಡಸ್ಟ್ರೀಯಲ್ ಎಸ್ಟೇಟ್ ಬೆಂಗಳೂರು-560044. ರವರಿಗೆ ಮಾಹಿತಿಗಾಗಿ.
2. ಜಿಲ್ಲಾ ಎನ್.ಆಯ್.ಸಿ ಅಧಿಕಾರಿಗಳು, ಎನ್.ಆಯ್.ಸಿ ಬಾಗಲಕೋಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕೊಡುತ್ತಾ ಜಿಲ್ಲಾ ವೆಬ್‌ಸೈಟ್ ನಲ್ಲಿ ಅರ್ಜಿನಮೂನೆಯನ್ನು ತಯಾರಿಸಿ ಆಯ್ಕೆ ವಿಧಾನ ಮತ್ತು ನಿಗಧಿಪಡಿಸಿದ ವಿದ್ಯಾರ್ಹತೆಗನುಗುಣವಾಗಿ ನಿಗಧಿತ ದಿನಾಂಕಗಳಿಂದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನುವು ಮಾಡಿಕೊಡುವುದು.
3. ಮೇಘಾ ಸರ್ವಿಸಸ್ ಪ್ರೈವೆಟ್ ಲಿ, ವಿಜಯಪೂರ.

   2/- ಈ ಮೇಲ್ಕಾಣಿಸಿದ ಹುದ್ದೆಗಳನ್ನು ತಮ್ಮ ಸಂಸ್ಥೆಯ ಮುಖಾಂತರ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪ್ರಚಲಿತ ದಿನಪತ್ರಿಕೆಗಳಲ್ಲಿ ಎನ್‌ಆಯ್‌ಸಿ ಜಿಲ್ಲಾ ವೆಬ್‌ಸೈಟ್‌ನ ನೀಡಿರುವ ಲಿಂಕ್‌ನ್ನು ಜಾಹೀರಾತು ನೀಡಿ ಪ್ರಚುರ ಪಡಿಸುವುದು ನಂತರ ದಾಖಲೆಗಳನ್ನು ಪರಿಶೀಲಿಸಿ ಮೆರಿಟ್ ಪಟ್ಟಿ ತಯಾರಿಸಿ ಸಲ್ಲಿಸುವುದು.
4. ಕಚೇರಿ ಪ್ರತಿ.